**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ ಃ 538/2021**

**ಚಾಸಾ ಃ 13**
**ಪ್ರಾಸಾ ಃ 10**

**ಹೆಸರು** ಃ ಜಗದೀಶ್ ಧೂಳಶೆಟ್ಟಿ
**ತಂದೆಯ ಹೆಸರು** ಃ ಶ್ರೀಶೈಲ್
**ವಯಸ್ಸು** ಃ 36 ವರ್ಷ
**ಉದ್ಯೋಗ** ಃ ಪಿ ಎಸ್ ಐ ಟಿ ನರಸೀಪುರ ಪೋಲಿಸ್ ಠಾಣೆ
**ವಾಸಸ್ಥಳ** ಃ ಟಿ ನರಸಿಪುರ

**ದಿನಾಂಕ ಃ 06-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ನಾನು ದಿನಾಂಕ 02-11-2020 ರಿಂದ 09-05-2022 ರವರೆಗೆ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20-12-2020 ರಂದು ಬೆಳಿಗ್ಗೆ ಸುಮಾರು 9.15 ಗಂಟೆಗೆ ನಾನು ಠಾಣೆಯಲ್ಲಿರುವಾಗ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದು ಬಂದ ಮಾಹಿತಿಯ ಮೇರೆಗೆ ನಾನು ಆಸ್ಪತ್ರೆಗೆ ತೆರಳಿ ಅಲ್ಲಿ ಮಾಹಿತಿಯ ಪ್ರತಿಯನ್ನು ಪಡೆದು, ಬೆಳಿಗ್ಗೆ 9.30 ರಿಂದ 10.30 ಗಂಟೆಯವರೆಗೆ ಚಾಸಾ-1 ರವರನ್ನು ವಿಚಾರಿಸಿ ಅವರ ಹೇಳಿಕೆ ದೂರನ್ನು ಪಡೆದುಕೊಂಡು ಠಾಣೆಗೆ ಹಿಂತಿರುಗಿ, ಚಾಸಾ-1 ರವರು ನೀಡಿದ ಸದರಿ ಹೇಳಿಕೆ ದೂರನ್ನು ಹೊಂದಿಕೊಂಡು ಠಾಣಾ ಮೊ. ಸಂಖ್ಯೆ 102/2020 ರಂತೆ ಪ್ರ ವ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಆಸ್ಪತ್ರೆಯಿಂದ ಬಂದ ಮಾಹಿತಿ ಎಂದು ಗುರುತಿಸಿ, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಾಹಿತಿಯನ್ನು ನಿಪಿ18 ಎಂದು, ಸಾಕ್ಷಿಯ ಸಹಿಯನ್ನು 18 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ, ಸಾಕ್ಷಿ ಅದು ಚಾಸಾ-1 ರವರು ನೀಡಿದ ಹೇಳಿಕೆ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ1 ರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ದಾಖಲಿಸಿದ ಪ್ರಥಮ ವರ್ತಮಾನ ವರದಿ ಎಂದು ಗುರುತಿಸಿ, ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸದರಿ ಪ್ರಥಮ ವರ್ತಮಾನ ವರದಿಯನ್ನು ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ19 ಎಂದು, ಸಾಕ್ಷಿಯ ಸಹಿಯನ್ನು ನಿಪಿ19 ಎ ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿ ಪತ್ತೆಗಾಗಿ ಚಾಸಾ-6 ಹಾಗೂ 7 ರವರನ್ನು ನೇಮಿಸಿರುತ್ತೇನೆ. ನಂತರ ಅದೇ ದಿನ ಚಾಸಾ6 ಹಾಗೂ 7 ರವರು ಆರೋಪಿಯನ್ನು ಪತ್ತೆ ಹಚ್ಚಿ ನನ್ನ ಮುಂದೆ ಹಾಜರುಪಡಿಸಿದ್ದು, ಆತನನ್ನು ವಿಚಾರಣೆ ಮಾಡಿ, ದಸ್ತಗಿರಿ ಕ್ರಮ ಜರುಗಿಸಿ, ಕೃತ್ಯ ಸ್ಥಳದಲ್ಲಿ ಮಹಜರ ಕ್ರಮ ಜರುಗಿಸುವ ಸಲುವಾಗಿ ಆರೋಪಿಯನ್ನು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಕೃತ್ಯ ನಡೆದ ಮನೆಯನ್ನು ಚಾಸಾ1 ರವರು ಬೀಗ ಹಾಕಿ, ಆಸ್ಪತ್ರೆಯಲ್ಲಿ ದಾಖಲಾಗಿದ್ದರಿಂದ ಮಹಜರ ಕ್ರಮ ಜರುಗಿಸಲಾಗದೆ ಠಾಣೆಗೆ ಹಿಂತಿರುಗಿ, ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ನಂತರ ದಿನಾಂಕ 21-12-2020 ರಂದು ಚಾಸಾ-1 ರವರ ರಕ್ತದ ಗುಂಪನ್ನು ಕೋರಿ ಹಾಗೂ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಚಾಸಾ12 ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ12 ರವರು ಚಾಸಾ-1 ರವರ ರಕ್ತದ ಗುಂಪನ್ನು ಪರೀಕ್ಷಿಸಿ ಅದು ಓ ಪಾಸಿಟಿವ್ ಗುಂಪಿಗೆ ಸೇರಿದ್ದು ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಅದನ್ನು ಹೊಂದಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಮೇಲೆ ಹೇಳಿದಂತೆ ಚಾಸಾ12 ರವರು ಚಾಸಾ1 ರವರ ರಕ್ತದ ಗುಂಪಿನ ಬಗ್ಗೆ ನೀಡಿದ ದೃಢೀಕರಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೃಢೀಕರಣ ಪತ್ರವನ್ನು ನಿಪಿ20 ಎಂದು, ಸಾಕ್ಷಿಯ ಸಹಿಯನ್ನು ನಿಪಿ20(ಎ) ಎಂದು ಗುರುತಿಸಲಾಯಿತು.

ನಂತರ ಚಾಸಾ1 ರವರು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ದಿನಾಂಕ 23-12-2020 ರಂದು ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿದ್ದು, ಆ ಪ್ರಕಾರ ನಾನು ಕೃತ್ಯ ಸ್ಥಳಕ್ಕೆ ಭೇಟಿ ನೀಡಿದ್ದು, ಅಲ್ಲಿ ಚಾಸಾ-1 ರವರು ಹಾಜರಿದ್ದು, ಅಲ್ಲಿಗೆ ಪಂಚರಾದ ಚಾಸಾ4 ಹಾಗೂ 5 ರವರನ್ನು ಬರಮಾಡಿಕೊಂಡು ಅವರಿಗೆ ನೋಟಿಸ್ ನ್ನು ನೀಡಿ, ಮಹಜರಿಗೆ ಪಂಚರಾಗುವಂತೆ ಕೋರಿಕೊಂಡಿದ್ದು ಅದಕ್ಕೆ

ಅವರು ಒಪ್ಪಿಕೊಂಡಿದ್ದು, ಚಾಸಾ1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಿದ್ದು, ಅಲ್ಲಿ ಮಹಜರ ಕ್ರಮ ಜರುಗಿಸಿ, ಕೃತ್ಯ ಸ್ಥಳದಲ್ಲಿ ಬಿದ್ದ ರಕ್ತದ ಕಲೆಗಳನ್ನು ಹತ್ತಿಗೆ ತಾಗಿಸಿಕೊಂಡು, ಸದರಿ ಹತ್ತಿಯನ್ನು, ಸಾದಾ ಹತ್ತಿ, ರಕ್ತದ ಕಲೆಗಳಿರುವ ಟಿಷು ಪೇಪರ್, ರಕ್ತದ ಕಲೆಯಿದ್ದ ಪಿರ್ಯಾದಿಯ ವೇಲು ಹಾಗೂ ಆರೋಪಿ ಕೃತ್ಯಕ್ಕೆ ಬಳಸಿದ ಮಂಡೆಕತ್ತಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸದರಿ ಮಹಜರನ್ನು ಮಧ್ಯಾಹ್ನ 12.30 ರಿಂದ 2.00 ಗಂಟೆಯವರೆಗೆ ಜರುಗಿಸಿರುತ್ತೇನೆ. ನಂತರ ಠಾಣೆಗೆ ಹಾಜರಾಗಿ ಸದರಿ ಮು ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂ. 167/2020 ರಂತೆ ದಾಖಲಿಸಿಕೊಂಡು ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಮೇಲೆ ಹೇಳಿದಂತೆ ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2(ಇ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ3 ರಿಂದ 12 ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಅದು ನಿಪಿ2 ರಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ಸಾಕ್ಷಿಗೆ ನಿಪಿ13 ಸಿಡಿಯನ್ನು ತೋರಿಸಲಾಗಿ ಸಾಕ್ಷಿಯು ಅದು ನಿಪಿ3 ರಿಂದ 12 ಫೋಟೋಗಳಿಗೆ ಸಂಬಂಧಿಸಿದ ಸಿಡಿ ಎಂದು ಗುರುತಿಸುತ್ತಾರೆ.

ನಂತರ ಅದೇ ದಿನ ಚಾಸಾ4 ರಿಂದ 7 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ10 ರವರು ನಿಪಿ2 ರಂತೆ ಕೃತ್ಯ ಸ್ಥಳದ ಮಹಜರ ಕ್ರಮ ಜರುಗಿಸುವ ಸಮಯದಲ್ಲಿ ತೆಗೆದ ಫೋಟೋಗಳನ್ನು ಪ್ರಿಂಟ್ ಹಾಕಿಸಿ, ನನ್ನ ಮುಂದೆ ಹಾಜರುಪಡಿಸಿ, ಆ ಬಗ್ಗೆ ಭಾ. ಸಾ. ಅಧಿನಿಯಮ 65(ಬಿ)ರಡಿಯಲ್ಲಿ ಪ್ರಮಾಣ ಪತ್ರ ನೀಡಿರುತ್ತಾರೆ. ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ15 ನ್ನು ತೋರಿಸಲಾಗಿ, ಸಾಕ್ಷಿಯು ಅದು ಚಾಸಾ10 ರವರು ಮೇಲೆ ಹೇಳಿದಂತೆ ಭಾ. ಸಾ. ಅಧಿನಿಯಮ 65(ಬಿ) ರಡಿಯಲ್ಲಿ ನೀಡಿದ ಪ್ರಮಾಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ15 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ15(ಬಿ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 01-01-2021 ರಂದು ಚಾಸಾ-1 ರವರಿಗೆ ಆದ ಗಾಯದ ಬಗ್ಗೆ ಚಾಸಾ12 ರವರಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ16 ನ್ನು ತೋರಿಸಲಾಗಿ, ಸಾಕ್ಷಿಯು

ಅದು ಚಾಸಾ1 ರವರಿಗೆ ಗಾಯದ ಬಗ್ಗೆ ಚಾಸಾ12 ರವರು ನೀಡಿದ ಗಾಯದ ಪ್ರಮಾಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ16(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಿಪಿ2 ರಡಿಯಲ್ಲಿ ಅಮಾನತ್ತುಪಡಿಸಿಕೊಂಡ ಮಂಡೆಕತ್ತಿಯನ್ನು ಚಾಸಾ12 ರವರ ಹಾಜರುಪಡಿಸಿ ಸದರಿ ಕತ್ತಿಯಿಂದ ಹಲ್ಲೆ ಮಾಡಿದ್ದಲ್ಲಿ, ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆಯೇ ಎಂದು ಕೇಳಿ ಅಭಿಪ್ರಾಯ ಕೇಳಿರುತ್ತೇನೆ. ಅದೇ ದಿನ ಚಾಸಾ12 ರವರು ಸದರಿ ಕತ್ತಿಯಿಂದ ಹಲ್ಲೆ ಮಾಡಿದಲ್ಲಿ ಗಾಯದ ಪ್ರಾಣ ಪತ್ರದಲ್ಲಿ ತಿಳಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂಬ ಅಭಿಪ್ರಾಯವನ್ನು ನೀಡಿ, ಸದರಿ ಮಂಡೆಕತ್ತಿಯನ್ನು ತಜ್ಞರ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಸೀಲು ಮಾಡಿ, ನನಗೆ ಹಿಂದಕ್ಕೆ ನೀಡಿರುತ್ತಾರೆ. ಸಾಕ್ಷಿಗೆ ನಿಪಿ17 ನ್ನು ತೋರಿಸಲಾಗಿ, ಸಾಕ್ಷಿಯು ಅದು ಚಾಸಾ-12 ರವರು ಮೇಲೆ ಹೇಳಿದಂತೆ ನೀಡಿದ ಅಭಿಪ್ರಾಯ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ17 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ17(ಬಿ) ಎಂದು ಗುರುತಿಸಲಾಯಿತು.

ನಂತರ ದಿನಾಂಕ **02-01-2021** ರಂದು ನಿಪಿ2 ಮಹಜರಿನಡಿಯಲ್ಲಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಚಾಸಾ9 ರವರ ಮೂಲಕ ತಜ್ಞರ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತ ರದಿನಾಂಕ **03-01-2021** ರಂದು ಚಾಸಾ9 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್್ತೇನೆ. ನಂತರ ದಿನಾಂಕ **20-02-2021** ರಂದು ಚಾಸಾ3 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್್ತೇನೆ. ನಂತರ ದಿನಾಂಕ **21-02-2021** ರಂದು ಚಾಸಾ2 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್್ತೇನೆ. ನಂತರ ದಿನಾಂಕ **29-02-2021** ರಂದು ಚಾಸಾ11 ರವರಿಂದ ಎಫ್ ಎಸ್ ಎಲ್ ವರದಿಯನ್ನು ಪಡೆದಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಮೇಲೆ ಹೇಳಿದಂತೆ ಚಾಸಾ11 ರವರಿಂದ ಪಡೆದ ಎಫ್ ಎಸ್ ಎಲ್ ನ ವರದಿ ಎಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಎಫ್ ಎಸ್ ಎಲ್ ನ ವರದಿಯನ್ನು ನಿಪಿ21 ಎಂದು, ಸಾಕ್ಷಿಯ ಸಹಿಯನ್ನು ನಿಪಿ21(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ **03-03-2021** ರಂದು ಮಾನ್ಯ ಅಪರ ಸಿವಿಲ್ ಜಡ್ಜ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆಯವರು ಚಾಸಾ2 ರವರ ಭಾ ದಂ ಪ್ರ

ಸಂ ಕಲಂ 164 ರಡಿಯಲ್ಲಿ ಹೇಳಿಕೆಯನ್ನು ದಾಖಲಿಸಿಕೊಂಡು ಅದರ ಪ್ರತಿಯನ್ನು ನೀಡಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 17-03-2021 ರಂದು ಆರೋಪಿಯ ವಿರುದ್ಧ ದೋಷರೋಪ ಸಾಬೀತಾದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 5ನ್ನು ನೋಡಿ ಗುರುತಿಸುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಪಾಟಿ ಸವಾಲು ಃ ಶ್ರೀ. ಹೆಚ್ ಆರ್ ಎ ಆರೋಪಿ ಪರ ವಕೀಲರಿಂದ ಃ**

ಆಸ್ಪತ್ರೆಯಿಂದ ಮಾಹಿತಿ ಠಾಣೆಯ ದೂರವಾಣಿಗೆ ಕರೆಯ ಮೂಲಕ ಬಂದಿರುತ್ತದೆ. ಸಾಕ್ಷಿ ಮುಂದುವರೆದು ಆಸ್ಪತ್ರೆಗೆ ಹೋಗಿ ಮಾಹಿತಿಯ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಠಾಣೆಗೆ ಮಾಹಿತಿ ಬೆಳಿಗ್ಗೆ ಸುಮಾರು 9.15 ರಿಂದ 9.20 ಗಂಟೆಗೆ ಬಂದಿರುತ್ತದೆ. ಠಾಣೆಯಿಂದ ಆಸ್ಪತ್ರೆಗೆ ಮುಖ್ಯ ರಸ್ತೆಯಿಂದ ಬಂದಲ್ಲಿ ಸುಮಾರು 2 ಕಿ ಮೀ ದೂರವಿರುತ್ತದೆ. ಆಸ್ಪತ್ರೆಯಿಂದ ಮಾಹಿತಿ ಬಂದ ನಂತರ ನಾನು ಹಾಗೂ ನಮ್ಮ ಮಹಿಳಾ ಸಿಬ್ಬಂದಿಯಾದ ಗೀತಾ ರವರು ಹೋಗಿರುತ್ತೇವೆ. ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ತನಿಖೆಯ ಸಮಯದಲ್ಲಿ ಯಾವುದೇ ವಿಚಾರಕ್ಕೆ ಬಾಗಿಯಾಗದೆ ಇದ್ದ ಕಾರಣ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ನಾವು ಆಸ್ಪತ್ರೆಗೆ ಬೆಳಿಗ್ಗೆ ಸುಮಾರು 9.30 ಗಂಟೆಗೆ ಹೋಗಿರುತ್ತೇವೆ. ನಾವು ಆಸ್ಪತ್ರೆಗೆ ಹೋದ ಸಮಯದಲ್ಲಿ ಚಾಸಾ1 ರವರ ಬಳಿ ಬೇರೆ ಯಾವುದೇ ಅವರ ಸಂಬಂಧಿಕರು ಇದ್ದಿರುವುದಿಲ್ಲ. ನಾವು ಹೋದ ಸಮಯದಲ್ಲಿ ಚಾಸಾ1 ರವರು ಮಾತನಾಡುವ ಸ್ಥಿತಿಯಲ್ಲಿದ್ದಿದ್ದರು. ಚಾಸಾ1 ರವರು ನನ್ನ ಜೊತೆ ಕನ್ನಡದಲ್ಲಿಯೇ ಮಾತನಾಡಿರುತ್ತಾರೆ. ಚಾಸಾ1 ರವರ ಹೇಳಿಕೆಯನ್ನು ನಾನೇ ದಾಖಲಿಸಿಕೊಂಡಿರುತ್ತೇನೆ. ನಾನು ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿಕೊಂಡ ನಂತರ ಅದನ್ನು ಅವರಿಗೆ ಓದಿ ಹೇಳಿರುತ್ತೇನೆ.

ಸದರಿ ಹೇಳಿಕೆ ದೂರಿಗೆ ಚಾಸಾ1 ರವರು ಯಾವ ಕೈಯಿಂದ ಸರಿ ಮಾಡಿರುತ್ತಾರೆಂದು ನನಗೆ ಈಗ ನೆನಪಿರುವುದಿಲ್ಲ. ಚಾಸಾ-1 ರವರ ಎಡಕೈ ಬೆರಳಿಗೆ ಗಾಯವಾಗಿರುತ್ತದೆ. ನಾನು ಆಸ್ಪತ್ರೆಗೆ ಹೋದ ಸಮಯದಲ್ಲಿ ಸದರಿ ಗಾಯಕ್ಕೆ ಆಗಲೇ ಬ್ಯಾಂಡೇಜ್ ಹಾಕಲಾಗಿತ್ತು. ಚಾಸಾ1 ರವರಿಗೆ ಮಲೆಯಾಳಂ ಭಾಷೆ

ಬರುತ್ತಿದ್ದು, ಕನ್ನಡ ಭಾಷೆ ಬಾರದೆ ಇದ್ದು ನಾನು ಚಾಸಾ1 ರವರು ಹೇಳಿದ ರೀತಿಯಲ್ಲಿ ಹೇಳಿಕೆಯನ್ನು ದಾಖಲಿಸಿಕೊಳ್ಳದೆ ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನೇ ಕನ್ನಡದಲ್ಲಿ ಬರೆದುಕೊಂಡು ಅದನ್ನು ಚಾಸಾ1 ರವರಿಗೆ ಓದಿ ಹೇಳದೆ, ಸುಳ್ಳು ಹೇಳಿಕೆ ದೂರನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಚಾಸಾ6 ಹಾಗೂ 7 ರವರು ವಿರಾಜಪೇಟೆಯ ವಿದ್ಯಾನಗರದ ಬ್ರೈಟ್ ಶಾಲೆಯ ಬಳಿ ವಶಕ್ಕೆ ಪಡೆದು ನನ್ನ ಮುಂದೆ ಮಧ್ಯಾಹ್ನ ಸುಮಾರು 12.15 ಗಂಟೆಗೆ ಹಾಜರುಪಡಿಸಿರುತ್ತಾರೆ. ಆರೋಪಿಯನ್ನು ವಿಚಾರಣೆ ಮಾಡಿರುತ್ತೇನೆ. ಆರೋಪಿಯಿಂದ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಳ್ಳದೆ ಇರುವುದರಿಂದ ಅವರ ಹೇಳಿಕೆ ದಾಖಲಿಸಿಕೊಂಡಿರುವುದಿಲ್ಲ.

ಸದರಿ ದಿನದಂದು ಚಾಸಾ6 ಹಾಗೂ 7 ರವರು ಆರೋಪಿಯನ್ನು ಪತ್ತೆ ಹಚ್ಚಿ ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಜೊತೆ ಕೃತ್ಯ ಸ್ಥಳಕ್ಕೆ ನಾನು ನಮ್ಮ ಸಿಬ್ಬಂದಿಗಳಾದ ಚಾಸಾ-6, 7 ಹಾಗೂ 10 ರವರು ಹೋಗಿರುತ್ತೇವೆ. ಆರೋಪಿಯನ್ನು ಕೃತ್ಯ ಸ್ಥಳದಲ್ಲಿ ವಿಚಾರಿಸಿದಾಗ ಸದರಿ ಮನೆಯಲ್ಲಿ ತಾನು ಹಾಗೂ ತನ್ನ ಹೆಂಡತಿಯಾದ ಚಾಸಾ1 ರವರು ವಾಸ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಮನೆಯ ಬೀಗ ಹಾಕಲಾಗಿತ್ತು ಎಂದು ನುಡಿಯುತ್ತಾರೆ. ಆರೋಪಿಯನ್ನು ವಿಚಾರಿಸಿದಾಗ ಆತನು ತನ್ನ ಬಳಿ ಮನೆಯ ಕೀ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಸದರಿ ಮನೆಗೆ ಎರಡು ಬಾಗಿಲುಗಳಿದ್ದು, ಅವು ಎರಡು ಬಾಗಿಲಿಗೂ ಬೀಗ ಹಾಕಲಾಗಿತ್ತು. ಆರೋಪಿಯ ಜೊತೆ ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರ ರಕ್ತದ ಗುಂಪಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿಗಳು ನಿಪಿ20 ರಂತೆ ಯಾವುದೇ ದೃಢೀಕರಣ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-1 ರವರು ದಿನಾಂಕ 22-12-2020 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿ ಅವರ ತಂದೆಯ ಮನೆಗೆ ಹೋಗಿರುತ್ತಾರೆ. ನಾನು ದಿನಾಂಕ 23-12-2020 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿದ್ದು, ಆ ಸಮಯದಲ್ಲಿ ಅಲ್ಲಿ ಚಾಸಾ-1 ರವರು ಇದ್ದಿರುತ್ತಾರೆ. ನಾವು ಕೃತ್ಯ ಸ್ಥಳಕ್ಕೆ ಮಧ್ಯಾಹ್ನ ಸುಮಾರು 12.20 ರಿಂದ 12.25 ಗಂಟೆಗೆ ಹೋಗಿರುತ್ತೇವೆ. ನಿಪಿ2 ಮಹಜರಿನ ಪಂಚರಾದ ಚಾಸಾ4 ಹಾಗೂ 5 ರವರು ಕೃತ್ಯ ಸ್ಥಳದ ಮನೆಯ ಮೇಲಿನ ಭಾಗದಲ್ಲಿ ಬಾಡಿಗೆಗೆ ಇರುತ್ತಾರೆ. ನಾವು ಕೃತ್ಯ ಸ್ಥಳಕ್ಕೆ ಹೋದ ಸಮಯದಲ್ಲಿ ಅಲ್ಲಿ ಚಾಸಾ1 ರವರು ಮಾತ್ರ ಇದ್ದಿರುತ್ತಾರೆ. ಚಾಸಾ-1 ರವರು ವಾಸವಿದ್ದ ಮನೆಯ ಮಲಗುವ ಕೋಣೆಯಲ್ಲಿ ರಕ್ತದ ಕಲೆ ಬಿದ್ದಿರುತ್ತದೆ.

ಘಟನೆ ನಡೆಯಲಾಯಿತು ಎಂದು ಹೇಳಿದ ದಿನದ ಸುಮಾರು ಮೂರು ದಿನದ ನಂತರ ನಾವು ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳಕ್ಕೆ ಮಹಜರ ಸಲುವಾಗಿ ಹೋಗಿರುತ್ತೇವೆ ಎಂದರೆ ಸರಿ. ರಕ್ತದ ಕಲೆಗಳು ಮಲಗುವ ಕೋಣೆಯ ನೆಲದಲ್ಲಿ, ಚಾಸಾ1 ರವರ ವೇಲು ಹಾಗೂ ಟಿಶು ಪೇಪರ್ ನಲ್ಲಿ ಇದ್ದಿರುತ್ತದೆ. ನಾವು ಕೃತ್ಯ ಸ್ಥಳಕ್ಕೆ ಹೋದ ಸಮಯದಲ್ಲಿ ರಕ್ತದ ಕಲೆಗಳು ಒಣಗಿದ್ದವು. ಮು ಮಾ 1 ಮಂಡೆಕತ್ತಿಯನ್ನು ಚಾಸಾ1 ರವರು ಮಲಗುವ ಕೋಣೆಯ ಡ್ರಾಯರ್ ನಿಂದ ತೆಗೆದು ಕೊಟ್ಟಿರುತ್ತಾರೆ. ನಾನು ಮಹಜರ ಜರುಗಿಸುವ ಸಮಯದಲ್ಲಿ ಸದರಿ ಮು ಮಾ 1 ಕತ್ತಿಯಲ್ಲಿ ರಕ್ತದ ಕಲೆ ಇದ್ದಿರುವುದು ಕಂಡು ಬಂದಿರುವುದಿಲ್ಲ. ಮು ಮಾ 1 ಕತ್ತಿಯನ್ನೇ ಅಮಾನತ್ತುಪಡಿಸಿಕೊಂಡಿದ್ದೇವೆ ಎಂದು ತೋರಿಸಲು ಯಾವುದೇ ವಿಶೇಷ ಗುರುತು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಕತ್ತಿಯನ್ನು ಮಹಜರ ಕ್ರಮ ಜರುಗಿಸಿ ನಾನೇ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಮು ಮಾ 1 ರಂತಹ ಕತ್ತಿ ಸಾಮಾನ್ಯವಾಗಿ ಗುಜರಿ ಹಾಗೂ ಬೇರೆ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಇರಬಹುದು.

ನೆಲದ ಮೇಲೆ ಬಿದ್ದ ರಕ್ತದ ಕಲೆಗಳನ್ನು ಹತ್ತಿಗೆ ನಾನೇ ತೆಗೆದಿರುತ್ತೇನೆ. ನ್ಯಾಯಾಲಯದ ಮುಂದಿರುವ ಹತ್ತಿಯಲ್ಲಿ ಯಾವುದೇ ರಕ್ತದ ಕಲೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಹತ್ತಿಯಲ್ಲಿ ಯಾವುದೇ ಕಲೆ ಇರುವುದಿಲ್ಲ ಬದಲಾಗಿ ಯಾವುದೋ ಕೆಂಪು ಶಾಹಿಯನ್ನು ಹಚ್ಚಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು ಮಾ 5 ವೇಲನಲ್ಲಿ ರಕ್ತದ ಕಲೆಗಳು ಕಾಣಿಸುತ್ತಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 5 ವೇಲನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ2 ಮಹಜರನ್ನು ನನ್ನ ಉಕ್ತಲೇಖನದ ಮೇರೆಗೆ ಚಾಸಾ10 ರವರು ಬರೆದಿರುತ್ತಾರೆ. ನಾನು ಯಾವುದೇ ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಅಲ್ಲಿ ಯಾವುದೇ ಮಹಜರ ಕ್ರಮ ಜರುಗಿಸಿ ಯಾವುದೇ ಮು ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಬದಲಾಗಿ ಸದರಿ ಮಹಜರನ್ನು ಈ ಪ್ರಕರಣಕ್ಕೋಸ್ಕರ ಠಾಣೆಯಲ್ಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಕೃತ್ಯದ ಸಂಬಂಧ ನಾನು ಸದರಿ ಮನೆಯಲ್ಲಿ ಬಾಡಿಗೆಗೆ ವಾಸವಿದ್ದ ಚಾಸಾ4 ಹಾಗೂ 5 ರವರನ್ನು ವಿಚಾರಿಸಿರುತ್ತೇನೆ. ಸಾಕ್ಷಿ ಮುಂದುವರೆದು ಅವರುಗಳು ಯಾವುದೋ ಗಲಾಟೆಯ ಶಬ್ದ ಕೇಳಿರುವುದಾಗಿ ಮಾತ್ರ ತಿಳಿಸಿರುತ್ತಾರೆ. ನಿಪಿ 3 ರಿಂದ 12 ಫೋಟೋಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯಾಧಿಕಾರಿಯವರೊಂದಿಗೆ ಶಾಮೀಲಾಗಿ ನಿಪಿ16 ರಂತೆ ಸುಳ್ಳು ಗಾಯದ ಪ್ರಮಾಣ ಪತ್ರ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು

ಮು ಮಾ 1 ಕತ್ತಿಯನ್ನು ವೈದ್ಯಾಧಿಕಾರಿಯಾದ ಚಾಸಾ12 ರವರ ಮುಂದೆ ಹಾಜರುಪಡಿಸಿರುವುದಿಲ್ಲ ಹಾಗೂ ಅವರು ಯಾವುದೇ ಕತ್ತಿಯನ್ನು ಪರೀಕ್ಷಿಸಿ ಅಭಿಪ್ರಾಯ ನೀಡಿರುವುದಿಲ್ಲ ಬದಲಾಗಿ ನಿಪಿ17 ಅಭಿಪ್ರಾಯ ದೃಢೀಕರಣ ಪತ್ರವನ್ನು ಈ ಪ್ರಕರಣಕ್ಕೋಸ್ಕರ ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮು ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಹಾಗೂ ಯಾವುದೇ ವರದಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿಯೇ ಆರೋಪಿಯು ಚಾಸಾ1 ಹಾಗೂ 3 ರವರ ವಿರುದ್ದ ನಮ್ಮ ಠಾಣೆಯಲ್ಲಿ ಪುಕಾರು ನೀಡಿದ್ದು, ಅದು ಅಪರಾಧ ಸಂ. 96/2020 ರಂತೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ ದಾಖಲೆ ಪರಿಶೀಲಿಸಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಬಿ ಅಂತಿಮ ವರದಿ ಸಲ್ಲಿಸಿದ್ದು ಅದು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ದಾಖಲೆ ಪರಿಶೀಲಿಸಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೂ, ಈ ಪ್ರಕರಣಕ್ಕೂ ಹಾಗೂ ಮು ಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಕೃತ್ಯವನ್ನು ಎಸಗದೆ ಇದ್ದಾಗಿಯೂ ಸಹ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿ, ಸರಿಯಾದ ತನಿಖೆಯನ್ನು ನಡೆಸದೆ, ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.